## ಕಳೆಗಳ ಹತೋಟಿ

ಬಿತ್ತಿದ ದಿನ ಅಥವಾ ಮಾರನೆಯ ದಿನ ಹೆಕ್ಟೇರಿಗೆ 1 ಲೀ. ಆಲಕ್ಲೋರ್ 50 ಇ.ಸಿ. (ಕರ್ಪೂ) ಅಥವಾ 800 ಮಿ.ಲೀ. ಮೆಟೊಲಾಕ್ಲೋರ್ 50 ಇ.ಸಿ. (ಡುವೆಲ್) ಅಥವಾ ಫ್ಲೂಕ್ಲೋರಾಲಿನ್ 45 ಇ.ಸಿ. (ಬಸಾಲಿನ್) 300 ಲೀ. ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡಬೇಕು. ಸಿಂಪರಣೆಯ ನಂತರ ಭೂಮಿಯನ್ನು ತುಳಿಯಬಾರದು. ಸಿಂಪರಣೆ ಮಾಡುವಾಗ ಮಣ್ಣಿನಲ್ಲಿ ಸಾಕಷ್ಟು ತೇವಾಂಶವಿರಬೇಕು ಹಾಗೂ ಹೆಂಟೆಗಳಿರದಂತೆ ಹೆಚ್ಚರ ವಹಿಸಿ. ಬೀಜದಿಂದ ವೃದ್ಧಿಯಾಗುವ ಕಳೆಗಳೆಲ್ಲವನ್ನೂ ಹತೋಟಿ ಮಾಡಬಹುದು. ಶೇಂಗಾ ಬೆಳೆಯಲ್ಲಿ ಕಳೆಗಳು 2-3 ಎಲೆಗಳ ಹಂತದಲ್ಲಿದ್ದಾಗ ಇಮಾಜೆತಾಪೈರ್ (ಪರಸ್ಯೂಟ್) 250 ಮಿ.ಮೀ / ಎಕರೆಗೆ ಬಳಸುವುದರಿಂದ ಹತೋಟಿ ಮಾಡಬಹುದು.

## ಬೆಳೆ ಆವರ್ತನೆ ಮತ್ತು ಅಂತರ ಬೆಳೆ ಬೇಸಾಯ

ಶೇಂಗಾ ಬೆಳೆಯೊಂದನ್ನೇ ಪ್ರತಿ ವರ್ಷ ಒಂದೇ ಜಮೀನಿನಲ್ಲಿ ಬೆಳೆದರೆ ಭೂಮಿಯ ಫಲವತ್ತತೆ ಕಡಿಮೆಯಾಗಿ ಇಳುವರಿ ಕುಂಠಿತಗೊಳ್ಳುತ್ತದೆ. ಪ್ರತಿ ವರ್ಷ ಬೇರೆ ಬೇರೆ ಬೆಳೆಗಳನ್ನು ಆವರ್ತನೆ ಮಾಡುವುದರಿಂದ ಮತ್ತು ಅಂತರ ಬೆಳೆ ಬೆಳೆಯುವುದರಿಂದ ಭೂಮಿಯ ಫಲವತ್ತತೆ ಸುಧಾರಿಸುತ್ತದೆ. ಹೀಗೆ ಮಾಡುವುದರಿಂದ ಕೀಟ ಮತ್ತು ರೋಗಗಳ ಬಾಧೆ ಕಡಿಮೆಯಾಗುತ್ತದೆ ಹಾಗೂ ಭೂಮಿಯ ಫಲವತ್ತತೆಯನ್ನು ಕಾಪಾಡಬಹುದು. ತೊಗರಿ, ಹರಳು, ಅಲಸಂದೆ, ಹೆಸರು ಆಧಾರಿತ ಬೆಳೆ ಪದ್ಧತಿಯನ್ನು ಪರ್ಯಾಯವಾಗಿ ಬೆಳೆಯಬಹುದು.

### ಸೂಕ್ತವಾದ ಬೆಳೆ ಆವರ್ತನೆಗಳು

1. ಶೇಂಗಾ – ತೊಗರಿ (2 ಅಡಿ ಜೋಡಿಸಾಲು)+ ಅಂತರ ಬೆಳೆಯಾಗಿ 4 ಸಾಲು ಅಲಸಂದೆ ಅಥವಾ ಹೆಸರು ಅಥವಾ ಉದ್ದು
2. ಶೇಂಗಾ – ಹೈಬ್ರಿಡ್ ಸಜ್ಜೆ
3. ಶೇಂಗಾ – ಬಿಳಿಜೋಳ
4. ಶೇಂಗಾ – ಮೆಕ್ಕೆ ಜೋಳ (1:1)
5. ಶೇಂಗಾ + ತೊಗರಿ + ಹರಳು

**ಅಂತರ ಬೆಳೆಗಳು** : ನಾಲ್ಕು ಸಾಲುಗಳ ಬಿತ್ತನೆ ಕೂರಿಗೆಯನ್ನು ಬಳಸಿದರೆ, ಕೆಳಗಿನ ಅಂತರ ಬೆಳೆಗಳನ್ನು ಸೂಚಿಸಿರುವ ಅನುಪಾತದಲ್ಲಿ ಬೆಳೆಯಬಹುದು.

| | | |
|---|---|---|
| 1. | ಶೇಂಗಾ – ತೊಗರಿ | 8:2 ಸಾಲುಗಳು (ಜೋಡಿ ಸಾಲು) |
| 2. | ಶೇಂಗಾ(4) – ಅಲಸಂದೆ(1) | 4:1 ಸಾಲುಗಳು |
| 3. | ಶೇಂಗಾ – ತೊಗರಿ | 8:1 ಸಾಲುಗಳು |
| 4. | ಶೇಂಗಾ – ಹರಳು | 8:1 ಸಾಲುಗಳು |
| 5. | ಶೇಂಗಾ – ಅಲಸಂದೆ | 8:1 ಸಾಲುಗಳು |
| 6. | ಶೇಂಗಾ – ಹೆಸರು /ಉದ್ದು | 8:1 |

### ಸಾಲುಗಳು

ಶೇಂಗಾ ಬೆಳೆಯ ಹೊಲದ ಸುತ್ತಲೂ ಎರಡು ಸಾಲು ಸಜ್ಜೆ ಬೆಳೆಯುವುದರಿಂದ ಮಣ್ಣಿನ ತೇವಾಂಶವನ್ನು ಕಾಪಾಡಿಕೊಂಡು ರೋಗ ಮತ್ತು ಕೀಟಗಳ ವಲಸೆಯನ್ನು ತಡೆಗಟ್ಟಬಹುದು.

### ಸಸ್ಯ ಸಂರಕ್ಷಣೆ :

1. **ಗೊಣ್ಣೆಹುಳು ಬಾಧೆಯನ್ನು ತಡೆಗಟ್ಟಲು** : ಕ್ಲೋರೊಪೈರಿಫಾಸ್ 20 ಇ ಸಿ (15 ಮಿ.ಲೀ./ಕೆ.ಜಿ. ಬೀಜಕ್ಕೆ) ಯಿಂದ ಬೀಜೋಪಚಾರ ಮಾಡಬೇಕು.
2. **ಸುರಳಿಪೂಚಿ ನಿಯಂತ್ರಣಕ್ಕೆ** : ಟ್ರೈಜೋಪಾಸ್ 40 ಇ.ಸಿ 2 ಮಿ.ಲೀ. ಅಥವಾ ಲ್ಯಾಮಡಾಸೈಹ್ಯಾಲೋಥ್ರಿನ್ 1 ಮಿ.ಲೀ ಒಂದು ಲೀಟರ್ ನೀರಿಗೆ ಬೆರೆಸಿ ಸಿಂಪರಿಸಬೇಕು.
3. **ಕಂಬಳಿಹುಳುವನ್ನು ನಿಯಂತ್ರಣಕ್ಕೆ** : ಫೆನ್ವಲರೇಟ್ 0.4 ಡಿ ಯನ್ನು (10 ಕೆ.ಜಿ / ಎಕರೆಗೆ )ಬಳಸಬೇಕು.
4. **ರಸ ಹೀರುವ ಕೀಟ (ಸಸ್ಯ ಹೇನು, ಥ್ರೀಪ್ಸ್ ನುಸಿ ಮತ್ತು ಹಸಿರು ಜಿಗಿಹುಳು) ನಿಯಂತ್ರಣಕ್ಕೆ** : 1.7 ಮಿ.ಲೀ. ಡೈಮಿಥೊಯೆಟ್ 30 ಇ.ಸಿ. ಕೀಟನಾಶಕಗಳನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪರಿಸಬೇಕು.
5. **ಎಲೆಚುಕ್ಕೆರೋಗ ಮತ್ತು ತುಕ್ಕು ರೋಗ ನಿಯಂತ್ರಣಕ್ಕೆ** : ಕ್ಲೋರೊಥ್ಯಾಲೊನಿಲ್ 2 ಗ್ರಾಂ/ಲೀ ನೀರಿಗೆ ಮಿಶ್ರಣಮಾಡಿ ಸಿಂಪರಿಸಬೇಕು.
6. **ಕುಡಿ ಸಾಯುವ ನಂಜು ರೋಗ ನಿಯಂತ್ರಣಕ್ಕೆ** : ಶೇ. 5ರಷ್ಟು ಬಿತ್ತನೆ ಬೀಜದ ಪ್ರಮಾಣ ಹೆಚ್ಚಿಸಬೇಕು ; ಬದು ಬೆಳೆಯಾಗಿ 2 ರಿಂದ 4 ಸಾಲು ಸಜ್ಜೆಯನ್ನು ಬೆಳೆಯಬೇಕು ; ಕೀಟವಾಹಕಗಳು ನಿಯಂತ್ರಿಸಲು ಇಮಿಡಾಕ್ಲೋಪ್ರಿಡ್ – 0.5 ಮಿ.ಲೀ/ಲೀ ನೀರಿಗೆ ಮಿಶ್ರಣಮಾಡಿ ಸಿಂಪರಿಸಬೇಕು.

**ಇಳುವರಿ** : ನೀರಾವರಿಯಲ್ಲಿ ಹೆಕ್ಟೇರಿಗೆ ಸುಮಾರು 5 ರಿಂದ 7 ಕ್ವಿಂಟಾಲ್ ಹಾಗೂ ಮಳೆಯಾಶ್ರಿತದಲ್ಲಿ 3 ರಿಂದ 4 ಕ್ವಿಂಟಾಲ್ ಕಾಯಿಯ ಇಳುವರಿಯನ್ನು ಪಡೆಯಬಹುದು.


ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :
ಭಾ.ಕೃ.ಅ.ಪ.- ಕೃಷಿ ವಿಜ್ಞಾನ ಕೇಂದ್ರ
ಹಿರೇಹಳ್ಳಿ, ತುಮಕೂರು-572 168, ಕರ್ನಾಟಕ
ದೂರವಾಣಿ : 0816-2243175 / 77
ಮಿಂಚಂಚೆ : iihrkvk@gmail.com
ಅಂತರ್ಜಾಲ : www.iihrkvk.org



ವಿಸ್ತರಣಾ ಹಸ್ತಪತ್ರಿಕೆ : 23


# ಶೇಂಗಾ ಬೆಳೆಯಲ್ಲಿ ಆಧುನಿಕ ಬೇಸಾಯ ಕ್ರಮಗಳು




ಲೇಖಕರು :
ಬಿ. ಹನುಮಂತೇಗೌಡ
ಪಿ. ಆರ್.ರಮೇಶ್
ಲೋಗನಂದನ್ ಎನ್.

ಭಾ.ಕೃ.ಅ.ಪ.- ಕೃಷಿ ವಿಜ್ಞಾನ ಕೇಂದ್ರ
ICAR- KRISHI VIGYAN KENDRA (IIHR)
ಹಿರೇಹಳ್ಳಿ, ತುಮಕೂರು Hirehalli, Tumakuru-572168

# ಶೇಂಗಾ ಬೆಳೆಯಲ್ಲಿ ಆಧುನಿಕ ಬೇಸಾಯ ಕ್ರಮಗಳು

ಶೇಂಗಾ ಬೆಳೆಯು ರಾಷ್ಟ್ರದ ಪ್ರಮುಖ ಎಣ್ಣೆ ಕಾಳು ಬೆಳೆಯಾಗಿದ್ದು, ಇದನ್ನು ನೀರಾವರಿ ಪ್ರದೇಶ ಮತ್ತು ಮಳೆಯಾಶ್ರಿತ ಪ್ರದೇಶದಲ್ಲಿ ಬೆಳೆಯಬಹುದು. ಶೇಂಗಾ ಬೆಳೆಯು ನಮ್ಮ ದೇಶದಲ್ಲಿ 6,917 ಸಾವಿರ ಹೆಕ್ಟೇರ್ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದ್ದು, ಒಟ್ಟು ಉತ್ಪಾದನೆ 8,216 ಸಾವಿರ ಟನ್‌ಗಳಷ್ಟಾಗಿದೆ. ಅಲ್ಲದೇ ಪ್ರತಿ ಹೆಕ್ಟೇರಿಗೆ ಸರಾಸರಿ 1188 ಕೆ.ಜಿ.ಗಳಷ್ಟಾಗಿದೆ. ಕರ್ನಾಟಕದಲ್ಲಿ 969 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, 742 ಸಾವಿರ ಟನ್‌ಗಳಷ್ಟು ಉತ್ಪಾದಿಸಲಾಗುತ್ತಿದೆ. ಆದರೆ ಪ್ರತಿ ಹೆಕ್ಟೇರ್‌ಗೆ 766 ಕೆ.ಜಿ.ಗಳಷ್ಟು ಸರಾಸರಿ ಮಾತ್ರ ಉತ್ಪಾದಿಸಲಾಗುತ್ತಿದೆ.

## ಮಣ್ಣು :

ಶೇಂಗಾವನ್ನು ಮುಖ್ಯವಾಗಿ ಮರಳು, ಕಲ್ಲುಪೊರೆ, ಕೆಂಪುಗೋಡು ಹಾಗೂ ಬೆಣಚುಕಲ್ಲು ಭೂಮಿಯಲ್ಲಿ ಬೆಳೆಯುತ್ತಿದ್ದಾರೆ. ಈ ಮಣ್ಣಿನಲ್ಲಿ ತೇವಾಂಶ ಸಂಗ್ರಹಿಸುವ ಸಾಮರ್ಥ್ಯ ಬಹಳ ಕಡಿಮೆ. ಒಂದು ಮೀಟರ್ ಮಣ್ಣಿನ ಪದರಿನಲ್ಲಿ ಸುಮಾರು 50-75 ಮಿ.ಮೀ. ತೇವಾಂಶವನ್ನು ಸಂಗ್ರಹಿಸಬಲ್ಲದು. ಆದ್ದರಿಂದ ಬರ ನಿಗ್ರಹಿಸುವ ಸಾಮರ್ಥ್ಯವಿಲ್ಲದೆ ಬಹಳಷ್ಟು ಬೆಳೆಗಳು ಮಳೆಯಿಲ್ಲದ ಸಮಯದಲ್ಲಿ ಒಣಗುತ್ತವೆ.

## ಶೇಂಗಾ ತಳಿಗಳು :

| ತಳಿಗಳು | ಅವಧಿ (ದಿನಗಳಲ್ಲಿ) | ಬೀಜ ಪ್ರಮಾಣ ಕೆ.ಜಿ. ಹೆಕ್ಟೇರಿಗೆ | ಕಾಯಿ ಇಳುವರಿ (ಕಿ.ಗ್ರಾಂ/ಹೆ.) | ಬಳ್ಳಿಯ ಇಳುವರಿ (ಟನ್/ಹೆ.) | ಎಣ್ಣೆ ಇಳುವರಿ (ಕಿ.ಗ್ರಾಂ/ಹೆ.) | ಸುಲಿಯುವಿಕೆ ಪ್ರಮಾಣ (ಶೇ.) | ಎಣ್ಣೆ ಅಂಶ (ಶೇ.) |
|---|---|---|---|---|---|---|---|
| ಟಿ.ಎಂ.ವಿ.–2 | 105-110 | 110ಕೆ.ಜಿ | 1000-1200 | 3.5-4.0 | 500-600 | 72-75 | 43-45 |
| ಐ.ಸಿ.ಜಿ.ವಿ.-91114 | 90-95 | 130ಕೆ.ಜಿ | 1400-1600 | 4.0-5.0 | 600-700 | 70-74 | 46-47 |
| ಕೆ.ಸಿ.ಜಿ-6 | 105-110 | 110ಕೆ.ಜಿ | 1600-1800 | 4.5-5.0 | 700-800 | 72-75 | 48-49 |
| ಕೆ– 6 | 100-110 | 110ಕೆ.ಜಿ | 1500-1700 | 4.0-5.0 | 650-750 | 72-74 | 46-47 |
| ಜಿ.ಕೆ.ವಿ.ಕೆ -5 | 110-120 | 100ಕೆ.ಜಿ | 2200-2500 | 4.0-5.0 | 600-700 | 70-74 | 46-47 |

## ಬಿತ್ತನೆ ಕಾಲ

ಮುಂಗಾರಿನಲ್ಲಿ ಶೇಂಗಾ ಬೆಳೆಯನ್ನು ಜೂನ್-ಜುಲೈ ತಿಂಗಳಲ್ಲಿ ಬಿತ್ತಬೇಕು. ತಡವಾದ ಬಿತ್ತನೆಯಿಂದ ಶೇಂಗಾ ಇಳುವರಿ ಬಹಳ ಕುಗ್ಗುತ್ತದೆ. ಬೇಸಿಗೆ ಬೆಳೆಯನ್ನು ಡಿಸೆಂಬರ್ ಕೊನೆಯಿಂದ ಜನವರಿಯವರೆಗೂ ಬಿತ್ತಬಹುದು. ತದನಂತರ ಬಿತ್ತನೆ ಮಾಡಿದರೆ ಬೇಸಿಗೆ ತಾಪಕ್ಕೆ ಗುರಿಯಾಗಿ ಇಳುವರಿ ಕುಗ್ಗುತ್ತದೆ.

## ಬೀಜೋಪಚಾರ ಮತ್ತು ಬಿತ್ತನೆ ವಿಧಾನ

ಬಿತ್ತನೆಗೆ ಎರಡು ವಾರದ ಮುಂಚೆ ಭೂಮಿಯನ್ನು ಚೆನ್ನಾಗಿ ಹದ ಮಾಡಿ ಕೊಟ್ಟಿಗೆ ಮತ್ತು ರಾಸಾಯನಿಕ ಗೊಬ್ಬರಗಳನ್ನು ಮಣ್ಣಿಗೆ ಬೆರೆಸಿ ರೈಜೋಬಿಯಂ-3.75 ಗ್ರಾಂ ಮತ್ತು ಟ್ರೈಕೋಡರ್ಮ 5 ಗ್ರಾಂ ಜೀವಾಣುವಿನಿಂದ ಪ್ರತಿ ಕೆ.ಜಿ. ಬಿತ್ತನೆ ಬೀಜಕ್ಕೆ ಉಪಚರಿಸಿ ಬಿತ್ತನೆ ಮಾಡಿ ಅಥವಾ 4 ಟನ್ ಕೊಟ್ಟಿಗೆ ಗೊಬ್ಬರಕ್ಕೆ 1 ಕೆ.ಜಿ. ಟ್ರೈಕೋಡರ್ಮ ಬೆರೆಸಿ ಒಂದು ಎಕರೆ ಪ್ರದೇಶಕ್ಕೆ ಬಳಸುವುದರಿಂದ ಕತ್ತು ಮತ್ತು ಬುಡಕೊಳೆ ರೋಗವನ್ನು ಹತೋಟಿ ಮಾಡಬಹುದು. ಈ ರೋಗಗಳನ್ನು ಶಿಲೀಂಧ್ರ ನಾಶಕಗಳಾದ ಕ್ಯಾಪ್ಟಾನ್ ಅಥವಾ ಥೈರಾಮ್ ಅಥವಾ ಕಾರ್ಬೆನ್‌ಡೈಜಿಮ್ 2 ಗ್ರಾಂ ಪ್ರತಿ ಕೆ.ಜಿ ಬೀಜಕ್ಕೆ ಬೀಜೋಪಚಾರ ಮಾಡುವುದರಿಂದ ಹತೋಟಿ ಮಾಡಬಹುದು. ಸಾಲಿನಿಂದ ಸಾಲಿಗೆ 30 ಸೆಂ.ಮೀ ಮತ್ತು ಬೀಜದಿಂದ ಬೀಜಕ್ಕೆ 15 ಸೆಂ.ಮೀ ಅಂತರವಿರುವಂತೆ ಬಿತ್ತಬೇಕು. ಬೀಜ ಮತ್ತು ಗೊಬ್ಬರದ ಸಂಯುಕ್ತ ಕೂರಿಗೆಯಿಂದ ಬಿತ್ತನೆ ಮಾಡಿದ್ದಲ್ಲಿ ಗಿಡಗಳ ಮಧ್ಯೆ ಅಂತರ ಕಾಪಾಡಿಕೊಳ್ಳುವುದಲ್ಲದೇ ಗಿಡಕ್ಕೆ ಬೇಕಾದ ಪೋಷಕಾಂಶಗಳು ದೊರೆಯುತ್ತವೆ.

## ಸಮಗ್ರ ಪೋಷಕಾಂಶಗಳ ನಿರ್ವಹಣೆ (ಎಕರೆಗೆ)

1. **ಸಾವಯವ ಗೊಬ್ಬರ** : ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ 320 ಟನ್(8 ರಿಂದ 10 ಗಾಡಿ) ಅಥವಾ ಮೊದಲ ಮಳೆಗೆ ಸೆಣಬು (10 ಕೆ.ಜಿ/ಎಕರೆಗೆ) ಬೆಳೆಯನ್ನು ಶೇಂಗಾ ಬಿತ್ತುವ ಜಮೀನಿನಲ್ಲಿ ಬೆಳೆದು ಮುಗುಚುವುದರಿಂದ ಮಣ್ಣಿನ ಗುಣಧರ್ಮಗಳಾದ ಗಾಳಿಯಾಡುವಿಕೆ, ನೀರು ಹಿಡಿದಿಟ್ಟುಕೊಳ್ಳುವಿಕೆ, ಸಾವಯವ ಇಂಗಾಲ ಹೆಚ್ಚಿಸುವುದಲ್ಲದೇ ಬುಡ ಮತ್ತು ಕತ್ತುಕೊಳೆ ರೋಗಗಳನ್ನು ತಕ್ಕಮಟ್ಟಿಗೆ ನಿಯಂತ್ರಿಸಬಹುದು.

**ರೈಜೋಬಿಯಂ ಜೀವಾಣು** - 150 ಗ್ರಾಂ
**ರಂಜಕ ಕರಗಿಸುವ ಜೀವಾಣು** - 120 ಗ್ರಾಂ

1. **ರಾಸಾಯನಿಕ ಗೊಬ್ಬರಗಳು** :

| | ನೀರಾವರಿ | ಖುಷ್ಕಿ ಬೆಳೆ |
|---|---|---|
| ಸಾರಜನಕ | 10 ಕೆ.ಜಿ | 10 ಕೆ.ಜಿ |
| ರಂಜಕ | 30 ಕೆ.ಜಿ | 20 ಕೆ.ಜಿ |
| ಪೊಟ್ಯಾಷ್ | 15 ಕೆ.ಜಿ | 10 ಕೆ.ಜಿ |

2. **ಲಘು ಪೋಷಕಾಂಶಗಳು** : ಮರಳು ಮಿಶ್ರಿತ ಕೆಂಪುಗೋಡು ಮಣ್ಣಿನಲ್ಲಿ ಹೆಚ್ಚಾಗಿ ಸತುವಿನ ಅಂಶ ಕಡಿಮೆ ಇರುವುದು ಕಂಡುಬಂದಿದೆ ಅಂತಹ ಪ್ರದೇಶಗಳಲ್ಲಿ ಮಣ್ಣಿಗೆ ಒಂದು ಎಕರೆಗೆ 4 ಕೆ.ಜಿ ಸತುವಿನ ಸಲ್ಫೇಟ್‌ನ್ನು ಬೆರಸಬೇಕು.

3. **ಜಿಪ್ಸಂ ಗೊಬ್ಬರದ ಬಳಕೆ (ಎಕರೆಗೆ)** : ಜಿಪ್ಸಂ ಗೊಬ್ಬರವನ್ನು ಬಿತ್ತನೆ ಮಾಡುವ ಸಮಯದಲ್ಲಿ ಅಥವಾ ಬಿತ್ತನೆಯಾದ 30-45 ದಿನಗಳ ನಂತರ ಅಂದರೆ ಹೂ ಬಿಡುವ ಹಂತದಲ್ಲಿ ಎಕರೆಗೆ 200 ಕಿ.ಗ್ರಾಂ. ಪ್ರಮಾಣದಲ್ಲಿ ಮಣ್ಣಿಗೆ ಸೇರಿಸಬೇಕು. ಹೂವಿನ ಹಂತದಲ್ಲಿ ಸೇರಿಸುವಾಗ ಸಾಲಿನ ಎರಡು ಬದಿಯಲ್ಲಿ ಹಾಕಿ ನಂತರ ಮಣ್ಣು ಏರು ಹಾಕಬೇಕು.

## ಜಿಪ್ಸಂ ಬಳಕೆಯಿಂದಾಗುವ ಉಪಯೋಗಗಳು

ಜಿಪ್ಸಂನಲ್ಲಿ ಸುಣ್ಣದ ಅಂಶ ಶೇ 29 ರಷ್ಟು ಮತ್ತು ಗಂಧಕದ ಅಂಶ ಶೇ. 18 ರಷ್ಟು ಇರುತ್ತದೆ. ಜಿಪ್ಸಂ ಗೊಬ್ಬರದಲ್ಲಿರುವ ಸುಣ್ಣದ ಅಂಶವು ಹಲವು ರೀತಿಯಲ್ಲಿ ಅನುಕೂಲಕರವಾಗಿದ್ದು, ಯಾವುದೇ ಸಸ್ಯದ ಜೀವಕೋಶ ಪದರವು ಗಟ್ಟಿಯಾಗಿ, ಸದೃಢವಾಗಿರಲು ಸುಣ್ಣದ ಅಂಶ ಪ್ರಮುಖವಾಗಿ ಬೇಕಾಗುತ್ತದೆ. ಅಲ್ಲದೇ ಸುಣ್ಣವು ಬೇರುಗಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಶೇಂಗಾ ಬೆಳೆಗೆ ಸಾಕಷ್ಟು ಪ್ರಮಾಣದಲ್ಲಿ ಸುಣ್ಣ ಪೂರೈಸುವುದರಿಂದ ಕಾಯಿಗಳು ಜೊಳ್ಳಾಗುವುದಿಲ್ಲ. ಸಿಪ್ಪೆ ತೆಳುವಾಗಿ ಕಾಳುಗಳು ದಷ್ಟಪುಷ್ಟವಾಗಿ ಬೆಳೆಯುತ್ತವೆ. ಮಣ್ಣಿನಲ್ಲಿ ಸುಣ್ಣದ ಪ್ರಮಾಣವು ಸಾಕಷ್ಟು ಇದ್ದಲ್ಲಿ ಶೇಂಗಾ ಸಸಿಗೆ ಬರುವ ಕೆಲವು ಶಿಲೀಂಧ್ರ ರೋಗಗಳನ್ನು ತಡೆಗಟ್ಟಬಹುದು. ಸುಣ್ಣದ ಅಂಶದಿಂದ ಶೇಂಗಾದಲ್ಲಿ ಚೆನ್ನಾಗಿ ಬೇರು ಬರವುದಲ್ಲದೆ, ಬೇರಿನ ಮೇಲೆ ಹೆಚ್ಚಿನ ಪ್ರಮಾಣದಲ್ಲಿ ಸಾರಜನಕ ಕ್ರೋಢೀಕರಿಸುವ ಗಂಟುಗಳು ಬರಲಿಕ್ಕೆ ಸಹಾಯಕವಾಗುತ್ತದೆ. ಗಂಧಕವು ಎಣ್ಣೆ ಅಂಶವನ್ನು ಹೆಚ್ಚಿಸಿ ಕಾಯಿಗಳ ತೂಕ ಹೆಚ್ಚಿಸುತ್ತದೆ.

**ಸೂಚನೆ** : ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ರಾಸಾಯನಿಕ ಗೊಬ್ಬರ / ಲಘು ಪೋಷಕಾಂಶಗಳ ಬಳಕೆ ಪ್ರಮಾಣವನ್ನು ನಿರ್ಧರಿಸಬೇಕು ಹಾಗೂ ಕ್ಷಾರ ಮಣ್ಣಿನ ಪ್ರದೇಶಕ್ಕೆ ಜಿಪ್ಸಂ ಬಳಸಬೇಕು.

## ನೀರಾವರಿ ಮತ್ತು ಅಂತರ ಬೇಸಾಯ

ನೀರಾವರಿ ಬೆಳೆಗೆ ಬಿತ್ತನೆ ಸಮಯದಲ್ಲಿ ಒಂದು ಬಾರಿ ನೀರು ಹಾಯಿಸಬೇಕು. ಬಿತ್ತನೆಯಾದ 4 ವಾರಗಳವರೆಗೆ ಕಡಿಮೆ ನೀರು ಹಾಯಿಸಿ, ಭೂಮಿ ಮತ್ತು ಹವಾಗುಣಗಳಿಗೆ ಅನುಸಾರವಾಗಿ 10 ರಿಂದ 12 ದಿವಸಗಳಿಗೊಮ್ಮೆ ನೀರು ಹಾಯಿಸಬೇಕು. ಬಿತ್ತನೆ ಮಾಡಿದ 15, 30 ಮತ್ತು 45 ದಿನಗಳಲ್ಲಿ ಕುಂಟೆ ಹಾಯಿಸಿ ಕಳೆ ತೆಗೆಯುವುದು ಸೂಕ್ತ. ಬಿತ್ತಿದ 50 ದಿವಸಗಳ ನಂತರ ಕುಂಟೆ ಹಾಯಿಸಬಾರದು. ಬೆಳೆಗಳಿಗೆ ಕೊನೆ ಸಾರಿ ಎಡೆ ಕುಂಟೆ ಹೊಡೆಯುವಾಗ ಸಣ್ಣ ಪ್ರಮಾಣದಲ್ಲಿ ಮಣ್ಣು ಏರಿಸುವುದರಿಂದ ಬಾರಂಗಿಗಳು ಸರಳವಾಗಿ ಮಣ್ಣಿನಲ್ಲಿ ಸೇರಲು ಉತ್ತೇಜಿಸಿದಂತಾಗುತ್ತದೆ ಹಾಗೂ ಕಾಯಿಗಳ ಸಂಖ್ಯೆ ಹೆಚ್ಚಾಗುತ್ತದೆ.